ನಿಗಮದ ಕೇಂದ್ರ ಕಛೇರಿಯಲ್ಲಿ ಶ್ರೀ ಎ. ಆರ್ ಕೃಷ್ಣಮೂರ್ತಿ, ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:29ನೇ 2011ರಂದು ಮಧ್ಯಾಹ್ನ:12.30ಗಂಟೆಗೆ ಜರುಗಿದ 184ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ:

| ಉಪಸ್ಥಿತರು: | |
|---|---|
| **ಹೆಸರು ಮತ್ತು ಪದನಾಮ** | |
| **ಶ್ರೀ. ಎ.ಆರ್. ಕೃಷ್ಣಮೂರ್ತಿ** | ಮಾನ್ಯ ಅಧ್ಯಕ್ಷರು |
| **ಶ್ರೀ ಇ. ವೆಂಕಟಯ್ಯ, ಭಾ ಆ ಸೇ.,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಸಮಾಜ ಕಲ್ಯಾಣ ಇಲಾಖೆ<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| **ಶ್ರೀ ಸರ್ಫರಾಜ್‌ಖಾನ್, ಕೆ ಸಿ ಎ ಎಸ್.,** | ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು |
| **ಶ್ರೀ ಮುನಿಯಲ್ಲಪ್ಪ**<br>ಸರ್ಕಾರದ ಅಪರ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ,<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| **ಅನುಪಸ್ಥಿತರು:** | |
| ಶ್ರೀ ಎಂ ಎ ಹುಸೇನ್,<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಆರ್ಥಿಕ ಅಭಿವೃದ್ಧಿ ನಿಗಮ<br>ನವದೆಹಲಿ, ಸರ್ಕಾರದ ಪ್ರತಿನಿಧಿ | ಸದಸ್ಯರು |

ಶ್ರೀ ಸರ್ಫರಾಜ್‌ಖಾನ್, ನಿಗಮದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು, ಸಭೆಗೆ ಆಗಮಿಸಿದ್ದ ನಿಗಮದ ಮಾನ್ಯ ಅಧ್ಯಕ್ಷರು, ಶ್ರೀ ಇ. ವೆಂಕಟಯ್ಯ, ಭಾ ಆ ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಶ್ರೀ ಮುನಿಯಲ್ಲಪ್ಪ, ಸರ್ಕಾರದ ಅಪರ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಎಲ್ಲರಿಗೂ ಹಾರ್ದಿಕ ಸ್ವಾಗತ ಬಯಸಿದರು.

ನಿಗಮದ ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದ ಸಭಾ ಸದಸ್ಯರೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಸಭೆಯ ಕಾರ್ಯಸೂಚಿಯನ್ನು ಚರ್ಚಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

1. **ದಿನಾಂಕ: 27ನೇ ಮೇ 2011ರಂದು ಜರುಗಿದ 183ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯ ಬಗ್ಗೆ**

- ದಿನಾಂಕ: 27ನೇ ಮೇ 2011ರಂದು ಜರುಗಿದ 183ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸಿ, ಅಂಗೀಕರಿಸಿತು.

2. **ದಿನಾಂಕ: 27ನೇ ಮೇ 2011ರಂದು ಜರುಗಿದ 183ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯ ಅನುಸರಣಾ ವರದಿಯ ಬಗ್ಗೆ ಕೈಗೊಂಡ ಕ್ರಮ ಕುರಿತು**

- ದಿನಾಂಕ: 27ನೇ ಮೇ 2011ರಂದು ಜರುಗಿದ 183ನೇ ನಿರ್ದೇಶಕ ಮಂಡಳಿ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಿ, ಅಂಗೀಕರಿಸಿತು.
- ಅನುಸರಣಾವರದಿಯ ವಿಮರ್ಶನಾ ಸಂದರ್ಭದಲ್ಲಿ ಲೋಕಾಯುಕ್ತ ಮತ್ತು COD., ತನಿಖಾ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ತುರ್ತಾಗಿ ಕ್ರಮ ವಹಿಸುವುದಾಗಿ ಹಾಗೂ ಲೋಕಾಯುಕ್ತ ಪ್ರಕರಣಗಳ ವಿಚಾರಣೆಯನ್ನು ಮಾನ್ಯ ಸಮಾಜ ಕಲ್ಯಾಣ ಆಯುಕ್ತರ ಮೂಲಕ ಇಲಾಖಾ ವಿಚಾರಣೆ ಮಾಡುವಂತೆ ಕ್ರಮಕೈಗೊಳ್ಳಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು.
- ದಿನಾಂಕ:27.05.2011ರಂದು ನಡೆದ 183ನೇ ನಿರ್ದೇಶಕರ ಮಂಡಳಿ ಸಭೆಯ ವಿಷಯ ಸಂಖ್ಯೆ:14 ಶ್ರೀ ಐ ಹೆಚ್ ಸಂಗಮ್‌ದೇವ್, ಪತ್ರಿಕೋದ್ಯಮಿ ಇವರು ನಿಗಮದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ನಿರ್ಮಿಸಿರುವ ಸಾಕ್ಷ್ಯಚಿತ್ರದ ಮುಂಗಡ ಪಾವತಿ ಹಾಗೂ ಅವರ ಮೇಲೆ ಹೂಡಿರುವ ಕ್ರಿಮಿನಲ್ ಮೊಕದ್ದಮೆ ಕೈಬಿಡಲು ಹಾಗೂ ಅವರ ಕೋರಿಯಂತೆ ಹಿಂಪಡೆಯಲು ಮಂಡಳಿಯು ಅವರೊಡನೆ ಒಪ್ಪಂದ ಮಾಡಿಕೊಂಡು ಸಾಕ್ಷ್ಯಚಿತ್ರವನ್ನು ಸದ್ಯದ ವಾಸ್ತವ ಪರಿಸ್ಥಿತಿಗೆ ಅನುಗುಣವಾಗಿ ಪರಿಷ್ಕರಿಸಿ ಕೊಡಲು ಸೂಚಿಸಿತು.

3. **2011-12ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಕುರಿತು.**

ನಿಗಮದ 2011-12ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಾಮರ್ಶಿಸಿದ ನಿರ್ದೇಶಕ ಮಂಡಳಿಯು ಈ ಕೆಳ ಕಂಡ ಅಂಶಗಳ ಬಗ್ಗೆ ಒತ್ತು ನೀಡಿ, ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಮಂಡಿಸಲು ಸೂಚಿಸಲಾಯಿತು.

- ಘನ ಸರ್ಕಾರದಿಂದ ಹಂಚಿಕೆಯಾಗಿರುವ ಕ್ರೂಢೀಕೃತ ಅನುದಾನ ರೂ.25.00ಕೋಟಿಗಳನ್ನು ವಿವಿಧ ಯೋಜನೆಗಳಿಗೆ ಹಂಚಿಕೆ ಮಾಡಿ ಗುರಿ ನಿಗದಿ ಪಡಿಸುವುದು
- ಪ್ರಸಕ್ತ ಸಾಲಿಗೆ ನಿಗದಿಯಾಗಿರುವ ಅನುದಾನದ ಒಟ್ಟು ಮೊತ್ತದಲ್ಲಿನ ಶೇ:80ರಷ್ಟಕ್ಕೆ ಸೀಮಿತಗೊಳಿಸಿ ಜಿಲ್ಲಾವಾರು ಯೋಜನಾವಾರು ಭೌತಿಕ ಗುರಿ ನಿಗದಿ ಪಡಿಸಿ ಮಂಡಿಸಲು ಸೂಚಿಸಲಾಯಿತು.
- ಉಳಿದ ಶೇ.20ರಷ್ಟು ಅನುದಾನವನ್ನು ವಿಶೇಷ ಪ್ರಕರಣಗಳ ಮಂಜೂರಾತಿಗಾಗಿ ನಿರ್ದೇಶಕ ಮಂಡಳಿಯ ಅಧ್ಯಕ್ಷರ ವಿವೇಚನಾ ಕೋಟಾಕ್ಕಾಗಿ ಕಾಯ್ದಿರಿಸಲು ಸೂಚಿಸಲಾಯಿತು.

ಮೇಲ್ಕಂಡ ಮಾರ್ಪಾಡಿನೊಂದಿಗೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮತ್ತು ನಿಗಮದ ಮಾನ್ಯ ಅಧ್ಯಕ್ಷರ ಸಹಮತಿಯ ನಂತರ ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು.

ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯ ಅನುಷ್ಠಾನ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನೀಡಿದ ಸಲಹೆಯಂತೆ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಪಾಲಿಕೆಗಳು ಶೇ. 22.75 ರಲ್ಲಿನ ಸಹಾಯಧನದ ಮೊತ್ತವನ್ನು ಡಾ: ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಲು ಮತ್ತು ಸಹಾಯಧನದೊಂದಿಗೆ ನಿಗಮದಿಂದ ಸಾಲದ ಮೊತ್ತ ಸೇರಿಸಿ ಫಲಾನುಭವಿಗಳಿಗೆ ನೆರವು ಕಲ್ಪಿಸಲು ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಭಿಪ್ರಾಯದಂತೆ ಈ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗನುಸಾರ ಯೋಜನೆಯನ್ನು ಪುನರ್ ಪರಿಷ್ಕರಿಸಿ ನೂತನ ಪ್ರಸ್ತಾವನೆ ತಯಾರಿಸಿ ಸಲ್ಲಿಸಲು ನಿಗಮಕ್ಕೆ ಸೂಚಿಸಲಾಯಿತು.

**ವಿಭಾಗಮಟ್ಟದ ಕಛೇರಿ ಮೂಲಕ ಅಧಿಕಾರ ವಿಕೇಂದ್ರೀಕರಣಗೊಳಿಸುವ ಕುರಿತು:**

4. **ನಿಗಮದ ವ್ಯವಸ್ಥಾಪಕ ನಿರ್ದೇಶಕರು/ಪ್ರಧಾನ ವ್ಯವಸ್ಥಾಪಕರು/ ಉಪ ಪ್ರಧಾನ ವ್ಯವಸ್ಥಾಪಕರು/ ಜಿಲ್ಲಾ ವ್ಯವಸ್ಥಾಪಕರಿಗೆ ವಿಭಾಗಮಟ್ಟದ ಆಡಳಿತ/ ಆರ್ಥಿಕ ಅಧಿಕಾರವನ್ನು ನೀಡುವ ಕುರಿತು**

- ನಿಗಮದ ಅಧಿಕಾರಿಗಳಿಗೆ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರ ನೀಡುವ ಸಂಬಂಧ ಪರಿಷ್ಕರಣೆ ಮಾಡಲಾದ ಪ್ರಸ್ತಾವನೆ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ವಿವರಿಸಿದರು. ರಾಜ್ಯದ 04 ವಿಭಾಗಗಳ ಸಂಬಂಧ ಸೃಷ್ಟಿಸಲಾದ ಪ್ರಧಾನ ವ್ಯವಸ್ಥಾಪಕರು/ ಉಪ ಪ್ರಧಾನ ವ್ಯವಸ್ಥಾಪಕರುಗಳ ವಿಭಾಗೀಯ ಕಛೇರಿಗಳಿಗೆ ನಿಗದಿತ ಆಡಳಿತಾತ್ಮಕ ಮತ್ತು ಹಣಕಾಸು ಪ್ರತ್ಯಾಯೋಜನೆಯ ಬಗ್ಗೆ ನಿರ್ದೇಶಕ ಮಂಡಳಿಯು ಪರಾಮರ್ಶಿಸಿ ಯೋಜನೆಗಳ ಪರಿಣಾಮಕಾರಿ ಮತ್ತು ತ್ವರಿತ ಅನುಷ್ಠಾನಕ್ಕೆ ಯೋಜಿತ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಇದರ ಜೊತೆಗೆ ವಿಭಾಗ ಮಟ್ಟದ ಕಛೇರಿಗೆ ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮಿತಿ ನಿಗದಿ ಪಡಿಸಿ ಸಂಪೂರ್ಣ ವೈದ್ಯಕೀಯ ವೆಚ್ಚದ ಬಿಲ್ಲಿನ ಮೊತ್ತವನ್ನು ಕೇಂದ್ರ ಕಛೇರಿಯಿಂದಲೇ ಸಂಬಂಧಿಸಿದ ಸಿಬ್ಬಂದಿಗೆ ಮಂಜೂರು ಮಾಡುವ ಬದಲಾವಣೆಯೊಂದಿಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು ಹಾಗೂ ದಿನಾಂಕ.1.8.2011 ರಿಂದ ಜಾರಿಗೆ ಬರುವಂತೆ ಸೂಚಿಸಲಾಯಿತು.

5. **ಭೂ ಒಡೆತನ ಯೋಜನೆಯಡಿಯಲ್ಲಿ ಅರ್ಧ ಎಕರೆಗಿಂತ ಹೆಚ್ಚು 1.00ಎಕರೆಗಿಂತ ಕಡಿಮೆ ನೀರಾವರಿ ಜಮೀನು ಹಾಗೂ 1.00ಎಕರೆ ಮೇಲ್ಪಟ್ಟು 2.00ಎಕರೆ ಒಳಪಟ್ಟು ಇರುವ ಖುಷ್ಕಿ ಜಮೀನು ಖರೀದಿ ಮಾಡಲು ಮಂಜೂರಾತಿ ನೀಡುವ ಬಗ್ಗೆ.**

- ಭೂ ಒಡೆತನ ಯೋಜನೆಯಡಿಯಲ್ಲಿ ಜಮೀನಿನ ಬೆಲೆ ಅಧಿಕವಿದ್ದು, ನಿಗಮದ ಘಟಕ ವೆಚ್ಚದ ಮಿತಿಯಲ್ಲಿ ಭೂಮಾಲೀಕರು ಜಮೀನು ಮಾರಾಟ ಮಾಡಲು ಒಪ್ಪಿಕೊಳ್ಳದ ಕಾರಣದಿಂದ ಅರ್ಧ ಎಕರೆಗಿಂತ ಹೆಚ್ಚು 1.00ಎಕರೆಗಿಂತ ಕಡಿಮೆ ನೀರಾವರಿ ಜಮೀನು ಹಾಗೂ 1.00ಎಕರೆ ಮೇಲ್ಪಟ್ಟು 2.00ಎಕರೆ ಒಳಪಟ್ಟು ಖುಷ್ಕಿ ಜಮೀನು ಹೊಂದಿರುವ ಭೂಮಾಲೀಕರು ಮಾರಾಟ ಮಾಡಲು ಒಪ್ಪಿಕೊಂಡಲ್ಲಿ, ಸರ್ಕಾರಿ ಆದೇಶದಲ್ಲಿ ನಿಗದಿ ಪಡಿಸಿರುವ ಘಟಕ ವೆಚ್ಚದ ಮಿತಿಯಲ್ಲಿ ಮಂಜೂರಾತಿ ನೀಡಲು ಮಂಡಳಿಯು ಅನುಮೋದಿಸಿತು.

**6. ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮದಿಂದ ಟಾಟಾ ಇಂಡಿಕಾ DLS.,100 ವಾಹನಗಳಿಗೆ ರೂ.297.00ಲಕ್ಷಗಳು ಬಂದಿರುವುದರಿಂದ ವಾಹನಗಳನ್ನು ಖರೀದಿಸಿ ಫಲಾನುಭವಿಗಳಿಗೆ ವಿತರಿಸಲು ಅನುಮತಿ ನೀಡುವ ಬಗ್ಗೆ**

- ಟಾಟಾ ಇಂಡಿಕಾ DLSಬದಲಿಗೆ ಟಾಟಾ ಇಂಡಿಕಾ V2LS. ವಾಹನಗಳನ್ನು ಖರೀದಿಸಿ ಹೆಚ್ಚುವರಿಯಾದ ಹಣವನ್ನು ಫಲಾನುಭವಿಗಳಿಂದ ವಾಹನ ವಿತರಕ ಸಂಸ್ಥೆಗೆ ಪಾವತಿಸಿ ವಾಹನಗಳನ್ನು ಪಡೆಯಲು ಸೂಚಿಸಬೇಕಾಗುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು ವಿವರಿಸಿದರು. NSCFDC., ಯಿಂದ ಬಂದಿರುವ ರೂ.297.00ಲಕ್ಷ ಗಳನ್ನು ಟಾಟಾ ಇಂಡಿಕಾ V2LS. ವಾಹನಗಳನ್ನು ಖರೀದಿಸಲು ಉಪಯೋಗಿಸಿಕೊಂಡು, ಎಲ್ಲಾ ದಾಖಲಾತಿ ಸಲ್ಲಿಸಿದ ಅರ್ಹ ಫಲಾನುಭವಿಗಳಿಗೆ ಆಯಾಯ ಜಿಲ್ಲೆಗಳಲ್ಲೇ ಸ್ಥಳೀಯ ಡೀಲರ್ಸ್‌ಗಳ ಮುಖೇನ ಖರೀದಿಸಿ ವಿತರಿಸುವುದು ಹಾಗೂ ಹೆಚ್ಚುವರಿ ಮೊತ್ತವನ್ನು ಫಲಾನುಭವಿಗಳಿಂದ ಭರಿಸಲು ಮಂಡಳಿಯು ತೀರ್ಮಾನಿಸಿತು.

**7. 2010-11ನೇ ಸಾಲಿನ ಆಂತರಿಕ ಲೆಕ್ಕ ಪರಿಶೋಧಕರ ಶುಲ್ಕ ಪಾವತಿಸುವ ಬಗ್ಗೆ**

- ಭಾರತ ಸರ್ಕಾರದ ಮಹಾ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರು ಮೆ: ಗಿರೀಶ್ ಮೂರ್ತಿ ಅಂಡ್ ಕುಮಾರ್ ಚಾರ್ಟೆಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ನಿಗಮದ 2010-11ನೇ ಸಾಲಿನ ಲೆಕ್ಕ ಪರಿಶೋಧನೆಗೆ ನೇಮಿಸಿರುವುದನ್ನು ಮಂಡಳಿಯು ಪರಿಶೀಲಿಸಿತು. 2010-11ನೇ ಸಾಲಿನ ಲೆಕ್ಕಪರಿಶೋಧನಾ ಕೆಲಸಕ್ಕೆ ಸದರಿಯವರಿಗೆ ರೂ.65,000/-ಗಳ ಗೌರವಧನ ಮತ್ತು ಸೇವಾತೆರಿಗೆಯೊಂದಿಗೆ 35ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದಂತೆ 1956ನೇ ಕಂಪನಿ ಕಾಯ್ದೆ ವಿಧಿ 224(8) (aa)ರನ್ವಯ ಪ್ರದತ್ತ ಅಧಿಕಾರದಂತೆ ಪಾವತಿಸಲು ಅನುಮೋದಿಸಲಾಯಿತು.

**8. ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರ ಕಛೇರಿಯಲ್ಲಿ ಜರುಗಿದ ಸಭೆಗಳಿಗೆ ವೆಚ್ಚ ಮಾಡಿದ ಬಿಲ್ಲುಗಳ ಹಣ ಮರುಪಾವತಿ ಕುರಿತು.**

- ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧಿಕಾರಿಗಳ ಕಛೇರಿಯಲ್ಲಿ ಫೆಬ್ರವರಿ , ಮಾರ್ಚ್ , ಏಪ್ರಿಲ್ ಮತ್ತು ಮೇ 2011ರಂದು ಜರುಗಿದ ಪರಿಶೀಲನಾ ಸಭೆಗಳಿಗೆ ಮಾಡಿದ ಖರ್ಚಿನ ಮೊತ್ತ ರೂ.22700/- ಗಳನ್ನು ಭರಿಸಲು ಅನುಮೋದಿಸಲಾಯಿತು.

**9. ಉನ್ನತ ಶಿಕ್ಷಣ ನೇರಸಾಲ ಯೋಜನೆಯಡಿ ವೃತ್ತಿ ಆಧಾರಿತ/ತಾಂತ್ರಿಕ ಶಿಕ್ಷಣ ಪಡೆಯುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಸಾಲ ಮಂಜೂರಾತಿ ಮಾಡುವ ಬಗ್ಗೆ.**

- ಕರ್ನಾಟಕ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ವಾರ್ಷಿಕ ವರಮಾನ ರೂ.2.00ಲಕ್ಷದವರೆಗಿನ ಅಭ್ಯರ್ಥಿಗಳು ಉನ್ನತ ಶಿಕ್ಷಣಕ್ಕೆ ಉಚಿತವಾಗಿ ಶಿಷ್ಯ ವೇತನ ನೀಡಲಾಗುತ್ತಿದ್ದು, NSCFDC., ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಪ್ರಸ್ತಾಪಿತ ಯೋಜನೆಯಡಿ ಮತ್ತೇ ಸಾಲ ನೀಡುವುದು ಹೆಚ್ಚಿನ ಹೊರೆ ಹೇರಿದಂತಾಗುತ್ತದೆ ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ನಿರ್ದೇಶಕ ಮಂಡಳಿಯು ಯೋಜನೆಯನ್ನು ಅನುಮೋದಿಸುವ ಅವಶ್ಯಕತೆ ಇಲ್ಲವೆಂದು ಹೆಚ್ಚುವರಿ ಕಾರ್ಯದರ್ಶಿಯಾದ ಆರ್ಥಿಕ ಇಲಾಖೆ ಇವರು ಅಭಿಪ್ರಾಯ ಪಟ್ಟಿರುತ್ತಾರೆ. ವಿಷಯದ ಬಗ್ಗೆ ಸುದೀರ್ಘ ಚರ್ಚೆಯ ನಂತರ

NSCFDC., ಮುಖಾಂತರ ಮಂಜೂರಾಗುವ ವಿದ್ಯಾಭ್ಯಾಸ ಸಾಲವನ್ನು ತಡೆ ಹಿಡಿದು ಈ ಯೋಜನೆಯನ್ನು ರಾಜ್ಯ ಸರ್ಕಾರದ ಶಿಷ್ಯವೇತನವಿಲ್ಲದೆ ಇರುವ ವಿದ್ಯಾರ್ಥಿಗಳಿಗೆ ಅಂದರೆ ರೂ.2.00ಲಕ್ಷ ಮೇಲ್ಪಟ್ಟು ವಾರ್ಷಿಕ ವರಮಾನ ಹೊಂದಿರುವ ಅಭ್ಯರ್ಥಿಗಳಿಗೂ ನೆರವಾಗುವ ರೀತಿಯಲ್ಲಿ ಯೋಜನೆಯನ್ನು ಪರಿಷ್ಕರಿಸುವಂತೆ NSCFDC.,ರವರಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

**10. ಚಾಮರಾಜನಗರ ಜಿಲ್ಲೆಯಲ್ಲಿ ಸಾಲ ಸವಲತ್ತು ವಿತರಣಾ ಸಮಾರಂಭಕ್ಕೆ ಸಿಬ್ಬಂದಿ ಖಾತೆಗೆ ರೂ.1.00ಲಕ್ಷ ಹಣ ಬಿಡುಗಡೆ ಮಾಡುವ ಬಗ್ಗೆ**

- ಚಾಮರಾಜನಗರ ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ವಿವಿಧ ಯೋಜನೆಗಳಡಿ ಸವಲತ್ತು ವಿತರಣಾ ಸಮಾರಂಭ ಕಾರ್ಯಕ್ರಮಕ್ಕೆ ಖರ್ಚುಮಾಡಲು ರೂ.1.00ಲಕ್ಷವನ್ನು ಜಿಲ್ಲಾ ವ್ಯವಸ್ಥಾಪಕರಿಗೆ ಬಿಡುಗಡೆಮಾಡಲು ಅನುಮೋದಿಸಿತು.

**11. ನೇರಸಾಲ ಯೋಜನೆಯಡಿ ಪೂರಕ ಭದ್ರತೆ ಪಡೆಯುವ ಬಗ್ಗೆ.**

- ನಿಗಮದ ನೇರಸಾಲ ಯೋಜನೆಯಡಿ ನಿಗದಿತ ಪೂರಕ ಭದ್ರತೆಯ ಜೊತೆಗೆ ಪಡೆಯಲಾದ ಸರ್ಕಾರಿ ನೌಕರರ ವೇತನ ಬಟವಾಡೆ ಅಧಿಕಾರಿಗಳಿಂದ ನಿಗಮದ ಸಾಲದ ಮೊತ್ತವನ್ನು ಜಾಮೀನುದಾರರ ವೇತನದಲ್ಲಿ ಕಡಿತಗೊಳಿಸಿ ನಿಗಮಕ್ಕೆ ಸಂದಾಯ ಮಾಡುವ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯುವುದನ್ನು ಕಡ್ಡಾಯಗೊಳಿಸಿ ಮುಂದುವರೆಸಲು ಸೂಚಿಸಲಾಯಿತು.

**12. ನೇರಸಾಲ ಹೈನುಗಾರಿಕೆ ಯೋಜನೆಯಡಿ ಘಟಕ ವೆಚ್ಚ ರೂ.35000/- ದಿಂದ ರೂ.58500/-ಗಳಿಗೆ ಹೆಚ್ಚಿಸುವ ಬಗ್ಗೆ.**

- ನೇರಸಾಲ ಹೈನುಗಾರಿಕೆ ಯೋಜನೆಯಡಿ ಘಟಕ ವೆಚ್ಚ ರೂ.35000/- ದಿಂದ 58500/-ಗಳಿಗೆ ಹೆಚ್ಚಿಸಿರುವ ಬಗ್ಗೆ ಈಗಾಗಲೇ ಸರ್ಕಾರದ ಆದೇಶ ಹೊರಡಿಸಿಲಾಗಿದೆ ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಿಳಿಸಿದರು. ಅದರಂತೆ ಯೋಜನೆಯ ಮಾರ್ಗಸೂಚಿ ತಯಾರಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು.

**13. 2010-11ನೇ ಸಾಲಿನಲ್ಲಿ ಸಾಲ ವಸೂಲಾತಿಯಲ್ಲಿ ಗಣನೀಯ ಸಾಧನೆ ಮಾಡಿರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.**

- 2010-11ನೇ ಸಾಲಿನಲ್ಲಿ ಜಿಲ್ಲಾ ಕಛೇರಿಗಳಿಂದ ಸಾಧಿಸಲಾದ ವಸೂಲಾತಿ ಗುರಿ ಮತ್ತು ಪ್ರಗತಿಯನ್ನು ನಿರ್ದೇಶಕರ ಮಂಡಳಿಯು ವಿಮರ್ಶಿಸಿ, ಸರಾಸರಿ ಸಾಧನೆ ವಸೂಲಾತಿ ಬೇಡಿಕೆಯ ಶೇ.5ಕ್ಕಿಂತ ಕಡಿಮೆ ಇರುವುದನ್ನು ಗಮನಿಸಿತು. ವಸೂಲಾತಿ ಸಾಧನೆ ಪ್ರೋತ್ಸಾಹ ಧನ ನೀಡುವ ಬಗ್ಗೆ ನಿರ್ದಿಷ್ಟ ಅಳತೆಗೋಲು/ಮಾನದಂಡ ನಿಗದಿ ಪಡಿಸಿ ಗರಿಷ್ಟ ವಾರ್ಷಿಕ ವಸೂಲಾತಿ ಗುರಿ ಸಾಧಿಸಿದವರಿಗೆ ಪ್ರೋತ್ಸಾಹಧನ ನೀಡುವ ಬಗ್ಗೆ ಅನುಮೋದಿಸಿತು.